ವಿಷಯ: ಕುಮಟಾ ಸರ್ಕಾರಿ ಆಸ್ಪತ್ರೆ ಕಟ್ಟಡ ಕಾಮಗಾರಿ ಬಗ್ಗೆ.

967 (1504)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ?

ಅ) ಕುಮಟಾ ಸರ್ಕಾರಿ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆ ಯಾವ ವರ್ಷದಲ್ಲಿ ಮಾಡಲಾಯಿತು?

ಆ) ಸದರಿ ಕಟ್ಟಡ ಕಟ್ಟಲು ಯಾವಾಗ ಪ್ರಾರಂಭಿಸಲಾಯಿತು?

ಇ) ಕಟ್ಟಡದ ಕಾಮಗಾರಿ ಈಗ ಯಾವ ಹಂತದಲ್ಲಿದೆ?

ಈ) ಕಟ್ಟಡವನ್ನು ಪೂರ್ತಿಯಾಗಿ ಎಂದು ಮುಗಿಸಲಾಗುವುದು?

ಉ) ಕೆಲಸದಲ್ಲಿ ತಡಮಾಡಿದ ಗುತ್ತಿಗೆದಾರರ ಮೇಲೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೊಸ ಆಸ್ಪತ್ರೆ ಕಟ್ಟಡ 1991ರಲ್ಲಿ ಮಾಡಲಾಯಿತು.

ಆ) 11.6.1991ರಲ್ಲಿ ಪ್ರಾರಂಭಿಸಲಾಗಿದೆ.

ಇ) ಫೆಬ್ರವರಿ 1998ರವರೆಗೆ ಕಟ್ಟಡದ ಪ್ಲಾಸ್ಟರಿಂಗ್ ಮತ್ತು ಫ್ಲೋರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

ಈ) ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಉ) ಕಾಮಗಾರಿಯನ್ನು ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ವಿಭಾಗ ಕೈಗೊಳ್ಳುವುದರಿಂದ ಅವರೇ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳುವರು.

ವಿಷಯ: ಬೆಂಗಳೂರು ಮಹಾನಗರ ಪ್ರದೇಶದಲ್ಲಿ ''ವಾಯು ಮಾಲಿನ್ಯ'' ತಡೆಗಟ್ಟುವುದು.

968 (1572)

ಶ್ರೀಮತಿ ಬಿ.ಟಿ.ಲಲಿತಾನಾಯಕ್ (ದೇವದುರ್ಗ): ಮಾನ್ಯ ಪರಿಸರ ಜೀವಿಶಾಸ್ತ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ

ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರದಲ್ಲಿ ದಿನೇ ದಿನೇ ವಾಯು ಮಾಲಿನ್ಯ ಹೆಚ್ಚುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಾದರೆ, ವಾಹನಗಳ ಹೊಗೆ ಕಾರ್ಖಾನೆಗಳ ಹೊಗೆ ಮಲಿನವಾದ ನೀರು ಹಾಗೂ ಶಬ್ದ ಮಾಲಿನ್ಯ ಇವುಗಳನ್ನು ತಡೆಗಟ್ಟಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) 1997-98ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

ಶ್ರೀ ಬಸವರಾಜ್ ನಿ. ಶಿವಣ್ಣನವರ್ (ಪರಿಸರ ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):

ಅ) ಬಂದಿದೆ.

ಆ) ಈ ಕಾನೂನುಗಳಡಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಉದ್ದಿಮೆಗಳು ಹಾಗೂ ವಾಹನಗಳು ವಿಸರ್ಜಿಸುವ ಕಲುಷಿತಗಳಿಗೆ ನಿರ್ದಿಷ್ಟ ಮಾನಕಗಳು ನಿಗಧಿಪಡಿಸಲಾಗಿದೆ.

2. ಈಗಾಗಲೇ ಚಾಲ್ತಿಯಲ್ಲಿರುವ ಉದ್ದಿಮೆಗಳು ವಿಸರ್ಜಿಸುವ ಕಲುಷಿತ ನೀರು, ಗಾಳಿ ಹಾಗೂ ಶಬ್ದವನ್ನು ನಿಯಂತ್ರಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಸೂಕ್ತ ಸಂಸ್ಕರಣ ಘಟಕಗಳನ್ನು ಅನುಮೋದಿಸಿ ಅವುಗಳು ಅನುಷ್ಠಾನಗೊಳ್ಳುವಂತೆ ಕ್ರಮ ಕೈಗೊಳ್ಳುತ್ತಿದೆ.

3. ಸಂಸ್ಕರಣ ಘಟಕಗಳ ಅನುಷ್ಠಾನಗೊಂಡ ಬಳಿಕ ಅವು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಬಗ್ಗೆ ಕಾಲ ಕ್ರಮವಾಗಿ ವಿವಿಧ ಮಾದರಿಗಳು ಸಂಗ್ರಹಿಸಿ ವಿಶ್ಲೇಷಿಸಿ ಸಂಸ್ಕರಣ ಘಟಕಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವ ಬಗ್ಗೆ ನಿಗಾ ವಹಿಸಿರುತ್ತಾರೆ.

4. ಮಂಡಳಿ ನಿಗಧಿಪಡಿಸಿದ ಮಾನಕಗಳು ಮತ್ತು ಷರತ್ತುಗಳನ್ನು ಹಾಗೂ ಮೇಲೆ ಉಲ್ಲೇಖಿಸಿರುವ ಕಾನೂನುಗಳನ್ನು ಉಲ್ಲಂಘನೆ ಮಾಡಿದ ಉದ್ದಿಮೆಯ ವಿರುದ್ಧ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುತ್ತಿದೆ.

5. ವಾಹನಗಳಿಂದ ವಿಸರ್ಜಿಸುವ ಕಲುಷಿತ ಮತ್ತು ಶಬ್ದಕ್ಕೆ ಮಾನಕಗಳ ನಿಗದಿಪಡಿಸಲಾಗಿದೆ. ಇವುಗಳ ನಿಯಂತ್ರಣ ಜವಾಬ್ದಾರಿಯನ್ನು ಸಾರಿಗೆ ಇಲಾಖೆ ಮೂಲಕ ನಿರ್ವಹಿಸಲಾಗುತ್ತಿದೆ.

6. ನಗರಸಭೆ ಹಾಗೂ ಪುರಸಭೆಗಳಿಂದ ಬರುವ ಕಲುಷಿತ ನೀರಿಗೆ ಮಾನಕಗಳು ನಿಗಧಿಪಡಿಸಲಾಗಿದೆ. ಪ್ರತಿ ಪುರಸಭೆ ಹಾಗೂ ನಗರಸಭೆ ಈ ಮಾನಕಗಳಿಗೆ ಸರಿಹೊಂದುವಂತೆ ತನ್ನ ಕಲುಷಿತ ನೀರು ಶುದ್ಧೀಕರಿಸಿ ಹೊರಬಿಡಬೇಕಾಗಿದೆ. ಈ ದಿಕ್ಕಿನಲ್ಲಿ ಸಾಧಿಸಿದ ಪ್ರಗತಿ ತೃಪ್ತಿಕರವಾಗಿಲ್ಲ.

7. ನದಿ ತೀರದ ಮೇಲೆ ನೆಲೆಸಿರುವ 8 ಪಟ್ಟಣಗಳಿಗೆ ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿ ವ್ಯಾಪಕವಾದ ಯೋಜನೆ ಕೈಗೆತ್ತಿಕೊಳ್ಳಲಾಗಿದ್ದು, ಈ ಕೆಲಸಗಳು ಭರದಿಂದ ಸಾಗುತ್ತಿದೆ. ಇವು ಪೂರ್ಣವಾದಲ್ಲಿ ಈ 8 ಪಟ್ಟಣಗಳು ಗೃಹ ಬಳಕೆಯ ಕಲುಷಿತ ನೀರು ಶುದ್ಧೀಕರಿಸಿದ ಮೇಲೆ ವಿಸರ್ಜಿಸಲಾಗುವುದು.

8. ಹೊಸ ಉದ್ದಿಮೆಗಳು ಹಾಗೂ ಬಡಾವಣೆಗಳು ಪ್ರಾರಂಭವಾಗುವ ಮುನ್ನವೆ ಅವುಗಳು ಅಳವಡಿಸಬೇಕಾದ ಮಾಲಿನ್ಯ ಕ್ರಮಗಳು ಮಾಲಿನ್ಯ ನಿಯಂತ್ರಣ ಮಂಡಳಿ ಪೂರ್ವಭಾವಿಯಾಗಿ ಪರಿಶೀಲಿಸಿ, ಅವುಗಳ ಸಂಪರ್ಕತೆ ಪರಿಶೀಲಿಸಿ ಅಂತಹ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲು ತನ್ನ ನಿರಪೇಕ್ಷಣ ಪತ್ರವನ್ನು ನೀಡಿದ ಮೇಲೆಯೇ 50 ಕೋಟಿಗಳಿಗೆ ಮೀರಿದ ಯೋಜನೆಗಳಿಗೆ ಕೇಂದ್ರ ಪರಿಸರ ಇಲಾಖೆ ಪರಿಸರ ವಿಮೋಚನಾ ಪತ್ರ ನೀಡುತ್ತಿದೆ. 50 ಕೋಟಿಗಿಂತ ಕಡಿಮೆಯ ಯೋಜನೆಗಳಿಗೆ ರಾಜ್ಯ ಪರಿಸರ ಇಲಾಖೆ ಅಂತಹ ಪರಿಸರ ವಿಮೋಚನಾ ಪತ್ರವನ್ನು ನೀಡುತ್ತಿದೆ. ಈ ರೀತಿ ಪರವಾನಗಿ ನೀಡುವ ಮೊದಲು ಯೋಜನೆಗಳಿಗೆ ಪರಿಸರ ಆಘಾತ ಅಧ್ಯಯನ, ಆಘಾತಗಳನ್ನು ಬಗೆಹರಿಸುವ ಕ್ರಮಗಳು ಮತ್ತು ಸಾರ್ವಜನಿಕ ವಿಚಾರಣೆ ನಡೆಸಿ ಪರಿಸರ ವಿಮೋಚನಾ ಪತ್ರಗಳನ್ನು ನೀಡುವುದನ್ನು ಕಡ್ಡಾಯ ಮಾಡಲಾಗಿದ್ದು, ಅವುಗಳನ್ನು ಪಾಲಿಸಲಾಗುತ್ತಿದೆ.

9. ಅಪಘಾತಗಳು ಸಂಭವಿಸಿ ಅನಿರೀಕ್ಷಿತ ಪರಿಸರ ಮಾಲಿನ್ಯ ಉಂಟಾದಲ್ಲಿ ಪರಿಸರ ಸಂರಕ್ಷಣಾ ಕಾಯ್ದೆಯಡಿ ಅಂತಹ ಉದ್ದಿಮೆಗಳನ್ನು ಕೂಡಲೇ ಸ್ಥಗಿತಗೊಳಿಸಿ ಪರಿಸ್ಥಿತಿಯು ಹತೋಟಿಗೆ ತಂದ ಮೇಲೆ ಅಪಘಾತಕ್ಕೆ ಕಾರಣಗಳು ತಿಳಿದು, ಅವುಗಳ ನಿವಾರಣೆಗೆ ಕ್ರಮ ಜರುಗಿಸಿದ ಮೇಲೆ ಅಂತಹ ಉದ್ದಿಮೆಗಳನ್ನು ಪುನಃ ಚಾಲನೆಯಲ್ಲಿ ತರಲು ಕ್ರಮ ಜರುಗಿಸಲಾಗುತ್ತಿದೆ. ಪರಿಸರ ಹಾನಿ ಆದಲ್ಲಿ ಪರಿಹಾರ ಹಣವನ್ನು ಸಹ

ಉದ್ದಿಮೆ ವತಿಯಿಂದ ವಸೂಲು ಮಾಡಲಾಗುತ್ತಿದೆ. ಹಾಗೂ ಅಪಘಾತದಲ್ಲಿ ನೊಂದ ಕುಟುಂಬದವರಿಗೆ ಸಂಬಂಧಪಟ್ಟ ಕಾನೂನುಗಳಡಿ ಪರಿಹಾರ ಹಣವನ್ನು ಸಹ ನೀಡಲಾಗುತ್ತಿದೆ.

10. ಉದ್ದಿಮೆ ಹಾಗೂ ಗೃಹ ಬಳಕೆ ವಿಸರ್ಜನೆಗಳಿಂದ ಕಲುಷಿತಗೊಳ್ಳಬಹುದಾದ ನೀರಿನ ಸಂಪನ್ಮೂಲಗಳ ಗುಣಮಟ್ಟವನ್ನು ಪ್ರತಿ ತಿಂಗಳು ಮಾಪನ ಮಾಡಿ ವಿವಿಧ ಭಾಗದ ನದಿಗಳ ನೀರಿನ ಬಳಕೆಯ ಆಧಾರದ ಮೇಲೆ ನದಿಗಳನ್ನು ವಿಂಗಡಿಸಲಾಗುತ್ತಿದೆ.

11. ರಾಜ್ಯದ ವಿವಿಧ ಪ್ರದೇಶದಲ್ಲಿ ಗಾಳಿಯ ಗುಣಮಟ್ಟವನ್ನು ತಿಳಿಯಲು ಅಂಬಿಯೆಂಟ್ ಮಾನಿಟರಿಂಗ್ ಸ್ಟೇಷನ್ ಟಾವರ್‌ಗಳನ್ನು ಸ್ಥಾಪಿಸಿ ಆ ಪ್ರದೇಶದ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದೆ.

12. ವಿವಿದ ಕಲುಷಿತಗಳನ್ನು ವಿಶ್ಲೇಷಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ತನ್ನ ಕೇಂದ್ರ ಪ್ರಯೋಗ ಶಾಲೆ ಮತ್ತು ಇತರ 4 ಪ್ರದೇಶಗಳಲ್ಲಿ ಪ್ರಾದೇಶಿಕ ಪ್ರಯೋಗ ಶಾಲೆಗಳನ್ನು ನೊಂದಾಯಿಸಿದೆ.

13. ವಾಹನಗಳಿಂದ ಹೊರಸೂಸುವ ಕಲುಷಿತಗಳು ಮಾಪನ ಮಾಡಲು ಮಂಡಳಿಯು ಉಪಕರಣಗಳ ಖರೀದಿಸಿ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಟಿ.ಎಸ್. ಸಂಸ್ಥೆಗಳಿಗೆ ನೀಡಿದೆ.

14. ವಾಹನಗಳಿಂದ ಆಗುವ ಮಾಲಿನ್ಯವನ್ನು ಮಾಪನ ಮಾಡಲು ಸಾರಿಗೆ ಇಲಾಖೆ ರಾಜ್ಯಾದ್ಯಂತ ವಿಶ್ಲೇಷಣಾ ಸಂಸ್ಥೆಗಳು ನೊಂದಾಯಿಸಿದೆ.

15. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮೂಲಕ ಸರಬರಾಜು ಮಾಡಲಾಗುತ್ತಿರುವ ಇಂಧನದ ಗುಣಮಟ್ಟವನ್ನು ಕಾಲಕ್ರಮೇಣ ಪರಿಶೀಲಿಸಿ ಗುಣಮಟ್ಟವನ್ನು ಉಲ್ಲಂಘಿಸಿದ ಪೆಟ್ರೋಲ್ ಬ್ಯಾಂಕ್‌ಗಳಿಗೆ ಕಾನೂನಿನನ್ವಯ ಕ್ರಮ ಜರುಗಿಸಲಾಗುತ್ತಿದೆ.

ಇ) ಈ ಉದ್ದೇಶಕ್ಕಾಗಿ ಈ ಕೆಳಕಂಡಂತೆ ಹಣವನ್ನು ಖರ್ಚು ಮಾಡಲಾಗಿದೆ.

ಅ) ಪರಿಸರ ಇಲಾಖೆವತಿಯಿಂದ ರೂ. 1,00,000-00

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ರೂ.48,88,850-00

ಇ) ಸಾರಿಗೆ ಇಲಾಖೆಯಿಂದ ರೂ. 35,548-00